149

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 24ನೇ ಆಗಸ್ಟ್ 1896.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಡಿಪೋಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ಜಂಗಲಿನಿಂದ 1897ನೇ ಇಸವಿ ಮಾರ್ಚಿ ಆಖೈರ ವಳಗಾಗಿ ನಾಟು, ಬೆಲಗು, ಗಳ ಜವಾಯಿಸು ಕೊಡುವದಕ್ಕೆ ಟೆಂಡರ್ ಗಳು ಅಂಗೀಕರಿಸಲ್ಪಡುತ್ತವೆ:—

ನಂಬರ್	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಆದದ್ದು.	ಜಂಗಲ್ ಹೆಸರು.	ಸುಮಾರು ಘಾಸಲೆ ಮೈಲಿ.	ಪರಾ.
1	ಶಿವಮೊಗ್ಗಾ ..	ಸಾಗುವಾನಿ ನಾಟೂ	100	ಭೂತಸಪ್ಪೆಲು	20	ಶಂಕರ ಫಾರೆಸ್ಟ್ ಡಿಟೋ
		ಜಂಗಲಿ ನಾಟೂ	200	ಕಬ್ಬೆಹಳ್ಳಿ, ಶಂಕರ	14	
		ಜಂಬೆ ನಾಟೂ	300	ಹಾರೋಹಿತ್ತಲು, ಸಾಗರವಳ್ಳಿ, ವಾರೇಕೊಪ್ಪ, ಆರನೇಲಿ ಮತ್ತು ಇತರ ಬಾಜೂ ಡಿಸ್ಟ್ರಿಕ್ಟು ಫಾರೆಸ್ಟ್ಗಳು	22	
		ಸಾಗುವಾನಿ ಬೆಲಗು	300	ಜೊಂಪೇನಹಳ್ಳಿ ಮತ್ತು ಬಾಜೂ ಡಿಸ್ಟ್ರಿಕ್ಟು ಜಂಗಲ್	13	
		ಜಂಗಲ್ ಬೆಲಗು	100	ಡಿಟೋ	13	
		ಕಿರಿ ಬಿದರು	12,000	ಶಂಕರ ಫಾರೆಸ್ಟ್	14	ಶಂಕರ ಫಾರೆಸ್ಟ್
2	ಆಯನೂರು ..	ಸಾಗುವಾನಿ ನಾಟೂ	100	ಮುಸರೂರು ಮತ್ತು ಬಾಜೂ ಡಿಸ್ಟ್ರಿಕ್ಟು ಫಾರೆಸ್ಟ್ಗಳು	12	ಮುಸರೂರು ಫಾರೆಸ್ಟ್
		ಜಂಗಲ್ ನಾಟೂ	75	ವಾರೇಕೊಪ್ಪ, ಹಾರೋಹಿತ್ತಲು, ಸಾಗರವಳ್ಳಿ ಡಿಸ್ಟ್ರಿಕ್ಟು ಜಂಗಲ್ಗಳು	12	
		ಸಾಗುವಾನಿ ಬೆಲಗು	200	ಕುಂಸಿ	10	
		ಕಿರಿ ಬಿದರು	5,000	ಕೂಡಿ, ಮತ್ತಲಿ, ಮತ್ತು ತಾವರೇ ಕೊಪ್ಪ	10	
3	ಚೆನ್ನಗಿರಿ ..	ಸಾಗುವಾನಿ ಬೆಲಗು	1,500	ಸಾರತಿ, ಹಗೇದಹಳ್ಳಿ, ಹಂಚಿಕಿದ್ದಾಪುರ ಮತ್ತು ಆಗರದಳ್ಳಿ ಡಿಸ್ಟ್ರಿಕ್ಟು ಜಂಗಲ್ಗಳು	11	
		ಕಿರಿ ಬಿದರು	50,000	ಭಂಡಿಗುದ್ದು, ಬದನೆಹಾಳು ಮತ್ತು ನುಲೆಬಸಲಿ	15	
4	ಪುಬ್ಬಾಣಿ ..	ಸಾಗುವಾನಿ ಬೆಲಗು	1,000	ಪುಬ್ಬಾಣಿ ಬ್ಲಾಕು	8	ಕುಕ್ಕವಾಡಾ ಪುಬ್ಬಾಣಿ ಡಿಟೋ
		ಜಂಗಲಿ ಬೆಲಗು	500	ಕೆಂಗಾಡೇಣು,	8	
		ಕಿರಿ ಬಿದರು	50,000	ಕಾಗಿಹಳ್ಳಿ, ರಪ್ಪಿಹಾಳು	10	
5	ಕಣಬೂರು ..	ಸಾಗುವಾನಿ ನಾಟೂ	100	ಕಣಬೂರು, ಹಾಗಲಮನೆ, ಆರಂಬಳ್ಳಿ ಮತ್ತು ಅಜ್ಜಿಗುಡ್ಡೆ ಡಿಸ್ಟ್ರಿಕ್ಟು ಜಂಗಲ್	6	
		ಜಂಗಲ್ ನಾಟೂ	150	ಡಿಟೋ	6	
6	ಸಮುದ್ರಹಳ್ಳಿ ..	ಡಿಟೋ	150	ಜೋರನೆಡೆಹಳ್ಳೀ ಫಾರೆಸ್ಟ್	6	
7	ಶಿಕಾರಿಪುರ ..	ಸಾಗುವಾನಿ ನಾಟೂ	25	ಕರಡಿಪಟ್ಟ ಫಾರೆಸ್ಟ್	16	
		ಜಂಗಲ್ ನಾಟೂ	100			
		ಕಿರಿ ಬಿದರು	10,000	ಕರಡಿಪಟ್ಟ ಮತ್ತು ಗಂಗವನಸರ ಫಾರೆಸ್ಟ್ಗಳು	12ರ ಲಾ|| 15	
		ಹೆಬ್ಬಿದರು	1,000	ಡಿಟೋ ಡಿಟೋ	ಡಿಟೋ	
		ಸಾಗುವಾನಿ ಬೆಲಗು	300	ಗಂಗವನಸರ ಮತ್ತು ಬಾಜೂ ಡಿಸ್ಟ್ರಿಕ್ಟು ಫಾರೆಸ್ಟ್	12	
		ಜಂಗಲ್ ಬೆಲಗು	100	ಡಿಟೋ ಡಿಟೋ	12	

ನಂಬರ್.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾ ಸಲೆ ಮೈಲಿ.	ಪರಾ.
8	ಕಿರಾಳಕೊಪ್ಪ ..	ಜಂಗಲ್ ನಾಟೂ	75	ಬೆಳಂದೂರು ಫಾರೆಸ್ಟ್	14	
		ಡಿಟೋ ಬೆಲಗು	150			
		ಹೆಬ್ಬಿದರು	500			
		ಕಿರಿ ಬಿದರು	5,000	ಕರಡಿ ಬೆಟ್ಟ	22	
		ಸಾಗುವಾನಿ ಬೆಲಗು	100	ಕವಲಿ, ಬಸವನಂದಿಹಳ್ಳಿ ಮತ್ತು ತೊಗವಿ ಫಾರೆಸ್ಟ್‌ಗಳು	7	
9	ಆನವಟ್ಟ ..	ಸಾಗುವಾನಿ ನಾಟೂ	50	ತೆಲಗಡ್ಡಿ ಫಾರೆಸ್ಟ್	8	
		ಡಿಟೋ ಬೆಲಗು	200			
		ಜಂಗಲ್ ನಾಟೂ	75	ಬೆಟ್ಟದ ಕುರ್ಲಿ	8	
		ಹೆಬ್ಬಿದರು	1,000			
		ಕಿರಿ ಬಿದರು	5,000			
10	ಚಿತ್ರದುರ್ಗ ..	ಸಾಗುವಾನಿ ನಾಟೂ	25	ಮನರೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ್‌ಗಳು	90	
		ಜಂಗಲ್ ನಾಟೂ	50	ಕಟ್ಟಹಳ್ಳಿ, ಶಂಕರ	84	
		ಸಾಗುವಾನಿ ಬೆಲಗು	500	ಸಾರತಿ, ಹಗೇದಹಳ್ಳಿ, ಹಂಚಿಕಿದ್ದಾಪುರ ಮತ್ತು ಆಗರದಹಳ್ಳಿ	49	
		ಕಿರಿ ಬಿದರು	12,000	ಭಂಡಿಗುಡ್ಡ, ಬದನೆಹಾಳು ನುಲೆ ಬಸಲಿ	53	
		ಹೆಬ್ಬಿದರು	300	ಡಿಟೋ	53	

2. ಎಲ್ಲಾ ಟೆಂಡರ್‌ಗಳ ಮೇಲೂ ಯಿಂಥಾ ಡಿಪೋವಿಗೆ ನಾಟೂ, ಬೆಲಗುಗಳ ಜಮಾಯಿಸುವ ಬಗ್ಯೆ ಟೆಂಡರ್ ಯಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಡಿಪೋ 1ಕ್ಕೆ 100 ರೂಪಾಯಿನಂತೆ ಕರ್ಣಸೀ ನೋಟೆ ಮೂಲಕ ಠೇವಣಿ ಹಾಜರ್ ಮಾಡತಕ್ಕದ್ದು. ತಿರಸ್ಕರಿಸಲ್ಪಟ್ಟ ಟೆಂಡರಿನ ಸಂಗಡ ಮೊಬಲಗು ವಾಪಸ್ ಮಾಡಲ್ಪಡುವದು.

3. ಟೆಂಡರ್‌ಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕರ್ಣಸರ್‌ವೇಟರ ಹೆಸರಿನಲ್ಲಿ ಬರಿಯಕ್ಕದ್ದು. 1896ನೇ ಇಸವಿ ಸೆಪ್ಟಂಬರ್ ತಾರೀಖು 28ನೇ ದಿವಿ 12 ಘಂಟೆ ವರಿಗೂ ಸದರೀ ಟೆಂಡರ್‌ಗಳು ಅಂಗೀಕರಿಸಲ್ಪಡುವವು.

4. ಪ್ರತಿ ಬಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಖ್ಮೀನಿನಂತೆ ನಾಟೂಗಳನ್ನು, ಕಡದು, ಕೆತ್ತಿ ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಆಖೈರ್ ದರ ನಮೂದಿಸತಕ್ಕದ್ದು.

ನಾಟೂಗಳು.

(1) 12 ಸಲೆ ಅಡಿ ಮತ್ತು ಅದಕ್ಕೆ ವಳಪಟ್ಟದ್ದಕ್ಕೆ.
(2) 12 ಸಲೆ ಅಡಿ ಮೇಲ್ಪಟ್ಟು 20 ಸಲೆ ಅಡಿ ವರಿಗೆ.
(3) 20 ಸಲೆ ಅಡಿಗೆ ಮೇಲ್ಪಟ್ಟದ್ದಕ್ಕೆ.

ಬೆಲಗುಗಳು.

(1) 4 ಸಲೆ ಅಡಿ ವಳಪಟ್ಟದ್ದಕ್ಕೆ.
(2) 4 ಅಡಿಗೆ ಮೇಲ್ಪಟ್ಟು 8 ಅಡಿ ವರಿಗೆ ಯಿರುವದಕ್ಕೆ.
(3) 8 ಅಡಿಗೆ ಮೇಲ್ಪಟ್ಟದ್ದಕ್ಕೆ.

ಹೆಬ್ಬಿದರು ಯೂ ಕಿರಿ ಬಿದರು ಗೆಳ 100ಕ್ಕೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಆಂಗೀಕರಿಸಿದ ವರ್ತಮಾನವನ್ನು ತಿಳಿದ ವಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡಬೇಕಲ್ಲದೇ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ್ರಿಗಾಗಿ ಪುನಹ 150 ರೂಪಾಯಿ ಠೇವಣಿ ಯಿಡತಕ್ಕದ್ದು. ಕಂಟ್ರಾಕ್ಟಿನ ಪ್ರತಿತ್ತಿನಲ್ಲಿ ಯಾವದಕ್ಕಾದರೂ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು.

6. ಬೆಂಕೀ ಕಾಲದಲ್ಲಿ ಕಂಟ್ರಾಕ್ಟುದಾರನು ಡೆಪ್ಯುಟಿ ಕರ್ಣಸರ್‌ವೇಟರ ಅಪ್ಪಣೆ ಅನುಸರಿಸಿ ನಡದುಕೊಳ್ಳಬೇಕು.

7. ಫಾರೆಸ್ಟ್ ಇಲಾಖೆಯವರು ನಿರ್ಣಯಮಾಡಿದ ಮರಗಳ ವಿನಹ ಬೇರೆ ಮರಗಳನ್ನ ಕಡಿಯಕೂಡದು, ಮತ್ತು ಡೆಪ್ಯುಟಿ ಕರ್ಣಸರ್‌ವೇಟರ ಅಪ್ಪಣೆ ಮೇರಿಗೆ ನಾಟೂಗಳನ್ನು ಸರಿಯಾಗಿ ಕೆತ್ತಿಸಬೇಕು.

8. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರ್ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕರ್ಣಸರ್‌ವೇಟರು ಸ್ವತಂತ್ರರಾಗಿ ಯಿರುತ್ತಾರೆ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕರ್ಣಸರ್‌ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

9. ಜಂಗಲಿನಿಂದ ನಾಟೂಗಳನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಡುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರಕಾರದವರು ರಸ್ತೆಯನ್ನಾಗಲಿ ಭಂಡಿದಾರಿಯನ್ನಾಗಲಿ ಮಾಡಿಸಿ ಕೊಡುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಈ ನೆಪದಿಂದ ನಾಟೂ ವಗೈರೆ ವಾಯಿದೆಯಲ್ಲಿ ತಾರದಿದ್ದರೆ ಈ ಕಾರಣವು ಅಂಗೀಕರಿಸಲ್ಪಡಲಾರದು.

10. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕರ್ಣಸರ್‌ವೇಟರ ಆಫೀಸಿನಲ್ಲಿ ಕೇಳತಕ್ಕದ್ದು, ಮತ್ತು ಅಲ್ಲಿ ನೋಟೀಸ್ ಹಲಿಗೇ ಮೇಲೆ ಇಸ್ತಿಹಾರ್‌ನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ನಾರಾಯಣರಾವ್,
ಡೆ|| ಕರ್ಣಸರ್‌ವೇಟರ್.